**Q.P. Code – 50350**

**ತೃತೀಯ ಬಿ.ಎ. ಪದವಿ ಪರೀಕ್ಷೆ**

**ಅಕ್ಟೋಬರ್/ನವೆಂಬರ್ 2014**

**(ಅಂಚೆ ಮತ್ತು ತೆರಪಿನ ಶಿಕ್ಷಣ)**

**ಬಸವ ತತ್ವ**

**(DAC 550) ಪತ್ರಿಕೆ 5 – ಶರಣರ ಆಂದೋಲನ ಹಾಗೂ ಹೊಸ ಸಮಾಜದ ಪರಿಕಲ್ಪನೆ**

**(ಹೊಸಬರಿಗೆ/ಹಳಬರಿಗೆ)**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

ವಿಭಾಗ – ಎ

1. ಯಾವುದಾದರೂ **ಎರಡು** ವಚನಗಳನ್ನು ವಿಶ್ಲೇಷಿಸಿ : **2 × 5 = 10**

(ಅ) ಓದಿ ಓದಿ ವೇದ ವಾದಕ್ಕಿಕ್ಕಿತು
ಕೇಳಿ ಕೇಳಿ ಶಾಸ್ತ್ರ ಸಂದೇಹಕ್ಕಿಕ್ಕಿತು
ಅರಿದಿಹೆ ಅರಿದಿಹೆನೆಂದು ಆಗಮ ಅರೆಯಾಗಿ ಹೋಯಿತ್ತು
ಪೂರೈಸಿಹೆ ಪೂರೈಸಿಹೆನೆಂದು ಪುರಾಣ ಪೂರ್ವದ ಬಟ್ಟೆಗೆ ಹೋಯಿತ್ತು
ನಾನೆತ್ತ? ತಾನೆತ್ತ? ಬೊಮ್ಮ ಬಟಬಯಲು ಚನ್ನಮಲ್ಲಿಕಾರ್ಜುನ.

(ಆ) ಪುಣ್ಯ ಪಾಪವಿಲ್ಲವಾಗಿ ಯಮನ ಹಂಗಿಲ್ಲ
ಬಂದುದನುಂಬನಾಗಿ ಮಾನವರ ಹಂಗಿಲ್ಲ
ಭವಗಟ್ಟವನಾಗಿ ದೈವದ ಹಂಗಿಲ್ಲ
ಸತ್ಯ ಜ್ಞಾನಾನಂದವೇ ತಾನಾಗಿ ಇನ್ನಾರ ಹಂಗಿಲ್ಲ
ಇನ್ನಾರ ಹಂಗಿಲ್ಲ ದಾತ ಗುಹೇಶ್ವರಲ್ಲಯ್ಯನೊಬ್ಬನೆ

(ಇ) ಗುರುವೆ ತೆತ್ತಿಗನಾದ
ಲಿಂಗವೆ ಮದುವಣಿಗನಾದ ನಾನೆ ಮದುವಳಿಗೆಯಾದನು
ಈ ಭುವನವೆಲ್ಲರಿಯಲು ಅಸಂಖ್ಯಾತರೆನಗೆ ತಾಯಿ ತಂದೆಗಳು
ಕೊಟ್ಟರು ಸಾದೃಶ್ಯವ ಪ್ರವರನ ನೋಡಿ
ಇದು ಕಾರಣ ಚನ್ನ ಮಲ್ಲಿಕಾರ್ಜುನನೆ ಗಂಡನೆನಗೆ
ಮಿಕ್ಕಿದ ಲೋಕದವರೆನಗೆ ಸಂಬಂಧವಿಲ್ಲ ನಮ್ಮ ಪ್ರಭುವೆ.

ವಿಭಾಗ – ಬಿ

2. ಯಾವುದಾದರೂ **ನಾಲ್ಕಕ್ಕೆ** ಉತ್ತರಿಸಿ : **4 × 10 = 40**

(ಅ) ಬುದ್ಧ ಮಾಡಿದ ಆಂದೋಲನವನ್ನು ವಿವರಿಸಿ.

(ಆ) ಡಂಭಾಚಾರದ ವಿರುದ್ಧ ಶರಣರು ಮಾಡಿದ ಆಂದೋಲನವನ್ನು ವಿವರಿಸಿ.

(ಇ) ಮೂಢನಂಬಿಕೆಗಳ ಬಗ್ಗೆ ಶರಣರ ಅಭಿಪ್ರಾಯವೇನು? ವಿವರಿಸಿ.

(ಈ) ಸಮಾಜವೆಂದರೇನು? ಶರಣರು ಕಂಡ ಹೊಸ ಸಮಾಜದ ಲಕ್ಷಣಗಳು ಯಾವುವು? ಥಾಮಸ್ ಮೇರ್‌ನ ಕಾಲ್ಪನಿಕ ಆದರ್ಶ ರಾಜ್ಯದ ಹಿನ್ನೆಲೆಯಲ್ಲಿ ವಿವರಿಸಿ.

(ಉ) ಸಮಾನತೆಯ ನೆಲೆಗಟ್ಟಿನ ಮೇಲೆ ಶರಣರ ಹೊಸ ಸಮಾಜದ ಪರಿಕಲ್ಪನೆಯನ್ನು ವಿವರಿಸಿ.

ವಿಭಾಗ – ಸಿ

3. ಯಾವುದಾದರೂ **ನಾಲ್ಕಕ್ಕೆ** ಉತ್ತರಿಸಿ : **4 × 5 = 20**

(ಅ) ಸೃಷ್ಟಿ ಮತ್ತು ಸೃಷ್ಟಿಕರ್ತ

(ಆ) ಪ್ರಾಚೀನ ಕಾಲದ ಗುರುಶಿಷ್ಯರ ಸಂಬಂಧ

(ಇ) ಶರಣರ ಕಾಯಕ ನಿಷ್ಠೆ

(ಈ) ಸ್ತ್ರೀ ಸ್ವಾತಂತ್ರ್ಯ

(ಉ) ಹೊಸ ಸಮಾಜದ ಸತಿಪತಿ

ವಿಭಾಗ – ಡಿ

4. ವಿಶೇಷ ಸೂಚನೆ : ಹೊಸಬರು ಈ ಪ್ರಶ್ನೆಯನ್ನು **ಕಡ್ಡಾಯವಾಗಿ** ಉತ್ತರಿಸಬೇಕು : **1 × 10 = 10**

(ಅ) ವರ್ಗ ರಹಿತ ಸಮಾಜ ಎಂದರೇನು? ಶರಣರ ದೃಷ್ಟಿಯಿಂದ ಪರಿಶೀಲಿಸಿ.

---